ದಿಃ19.04.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಸ್.ಎನ್.ಜಿ., ವಕೀಲರಿಂದಃ

1. ಸದರಿ ಸರ್ವೆ ನಂಬರ್ 56/2 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಮಂಜೂರಾದ ಸೈಟಿಗೆ ಸರ್ಕಾರದವರು ನಂಬರ್ ಕೊಟ್ಟಿರುವುದಿಲ್ಲ.

2. ಸದರಿ ಮಂಜೂರಾದ ಸೈಟಿನ ಕ್ಷೇತ್ರ ಆಗ ಪೂರ್ವ-ಪಶ್ಚಿಮ 25 ಮೊಳ, ಉತ್ತರ-ದಕ್ಷಿಣ 75 ಮೊಳ ಇರುತ್ತದೆ.

3. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕುಪತ್ರವನ್ನು ನೀಡಿರುವುದಿಲ್ಲ.

4. ನನ್ನ ತಾಯಿ ಸಿದ್ದಮ್ಮ ಇವಳ ಹೆಸರಿನಲ್ಲಿ ಯಾವುದೇ ಸೈಟನ್ನು ಮಂಜೂರು ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ.

5. ಚಾಸಾ.1 ವಿಜಯಮ್ಮ ನನ್ನ ಅತ್ತಿಗೆ ಎನ್ನುವುದು ಸರಿ.

6. ನಾನು ನಿವೃತ್ತ ಬಿಎಂಟಿಸಿಯ ನೌಕರ ಎನ್ನುವುದು ಸರಿ.

7. ನಾನು ನಿವೃತ್ತಿಯಾಗುವುದಕ್ಕಿಂತ ಮುಂಚೆ ಕೆಂಗೇರಿಯ ಉಪನಗರದಲ್ಲಿ ವಾಸವಾಗಿದ್ದೆನು.

8. ನಾನು ಕಳೆದ 6 ತಿಂಗಳಿನಿಂದ ಉಜ್ಜನಹಳ್ಳಿ ಗ್ರಾಮಕ್ಕೆ ಬಂದು ಹೋಗುತ್ತಿರುತ್ತೇನೆ ಎಂದರೆ, ಸನ್ 2016 ರಿಂದಲೇ ಬಂದು

ಹೋಗುತ್ತಿರುತ್ತೇನೆ ಎಂದು ಹೇಳುತ್ತೇನೆ.

9. ಉಜ್ಜನಹಳ್ಳಿ ಗ್ರಾಮದಿಂದ ಸುಮಾರು 2 ಕಿಮೀ ಅಂತರದಲ್ಲಿ ಭೂಸ್ವಾಧೀನವಾದ ಸರ್ವೆ ನಂಬರ್ 56/2ರಲ್ಲಿನ 1 ಎಕರೆ 6 ಗುಂಟೆ ಜಮೀನು ಇರುತ್ತದೆ ಎನ್ನುವುದು ಸರಿ.

10. ಸದರಿ ಜಮೀನಿನ ಪಕ್ಕದಲ್ಲಿಯೇ ಆರೋಪಿತರ ತಾಯಿಗೆ ಸಂಬಂಧಿಸಿದ ಸರ್ವೆ ನಂಬರ್ 56/1 ಇರುತ್ತದೆ ಎನ್ನುವುದು ಸರಿ.

11. ಸದರಿ ಸರ್ವೆ ನಂಬರ್ 56/1 ಮತ್ತು 56/2ರ ಮಧ್ಯದಲ್ಲಿ ಸರ್ಕಾರದವರು ಕಾಂಕ್ರೀಟ್ ರಸ್ತೆ ಮಾಡಿರುತ್ತಾರೆ ಎಂದರೆ, ಕೇವಲ ಸರ್ವೆ ನಂಬರ್ 56/2ರಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತೇನೆ.

12. ಆರೋಪಿತರು ತನ್ನ ತಾಯಿಯ 1 ಎಕರೆ 18 ಗುಂಟೆ ಜಮೀನಿನ ಅಳತೆ ಮಾಡಿಸಿ ಹದ್ದುಬಸ್ತು ಮಾಡಿಸಿರುತ್ತಾರೆ ಎಂದರೆ, ಅದನ್ನು ನಮಗೆ ತಿಳಿಸದಂತೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತೇನೆ.

13. ಆ ಸಮಯದಲ್ಲಿ ಚಾಸಾ.4 ತಮ್ಮಯ್ಯ ಮತ್ತು ಚಾಸಾ.5 ಈತನ ಹೆಂಡತಿಯಾದ ಗೌರಮ್ಮ ಸರ್ವೆ ಪಂಚನಾಮೆಗೆ ಸಹಿ ಹಾಕಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

14. ಸದರಿ ಸರ್ವೆಯ ವರದಿಯ ಪ್ರಕಾರ ಸರ್ವೆ ನಂಬರ್ 56/1 ರಲ್ಲಿ ನಾವು ಅಕ್ರಮವಾಗಿ ನೆಲೆಸಿರುತ್ತೇವೆ ಎಂಬುದು ಸರಿಯಲ್ಲ.

15. ಆ ಕಾರಣಕ್ಕಾಗಿ ನಾವೇ ಆರೋಪಿತರ ವಿರುದ್ದ ಗುಂಪುಗಾರಿಕೆ ಮಾಡಿಕೊಂಡು ಚಾಸಾ.1 ಇವಳ ಮುಖಾಂತರ ಒಂದು ಸುಳ್ಳು ದೂರನ್ನು ಕೊಡಿಸಿರುತ್ತೇವೆ ಎನ್ನುವುದು ಸರಿಯಲ್ಲ.

16. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ, ಚಾಸಾ.1 ಇವಳು ಸದರಿ ನಮ್ಮ ಸೈಟಿನಲ್ಲಿ ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಸ್ವಚ್ಛಗೊಳಿಸಲು ಹೋಗಿದ್ದಾಗ, ಆರೋಪಿತರು ಅಲ್ಲಿಗೆ ಬಂದು ಅವಳ ಜೊತೆಗೆ ಜಗಳ ಕಾಯ್ದು, ಸದರಿ ಸೈಟ್‌ನಲ್ಲಿ ನಮಗೆ ಸ್ವಚ್ಛ ಮಾಡಲು ಅವಕಾಶವಿಲ್ಲ ಎಂದು ಹೇಳಿ ಸದರಿ ಸೈಟು ನಮ್ಮ ಜಮೀನಾಗಿರುತ್ತದೆ ಎಂದು ತಂಟೆ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

17. ಅದೂ ಅಲ್ಲದೇ ಆರೋಪಿತರು ಚಾಸಾ.1 ಇವಳಿಗೆ ಅವಾಚ್ಯ ಶಬ್ದಗಳಿಂದ ಹೊಲತಿ ಎಂದು ಜಾತಿ ನಿಂದನೆ ಸಹ ಮಾಡಿ ಪ್ರಾಣದ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

18. ಆ ಸಮಯದಲ್ಲಿ ಚಾಸಾ.3, 5, 10, 12, 13 ಮತ್ತು ನಾನು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

19. ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ಇದ್ದುದ್ದರಿಂದ ವಿವಾದಿತ ಸ್ಥಳದಲ್ಲಿ ನಾನು ಇರಲೇ ಇಲ್ಲ ಮತ್ತು ಯಾವುದೇ ಘಟನೆ ನಡೆದೇ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

20. ಚಾಸಾ.1 ನನ್ನ ಅತ್ತಿಗೆಯಾಗಿರುವುದರಿಂದ, ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

21. ಆರೋಪಿತರ ಜಮೀನು ಚಾಸಾ.1 ಇವಳ ಜಮೀನಿನ ಪಕ್ಕದಲ್ಲಿ ಇರುವುದರಿಂದ ಆರೋಪಿತರಿಗೆ ಮಾನಸಿಕವಾಗಿ ಹಿಂಸೆ ನೀಡಲು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.